ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ. ನಂ ಃ**106/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಮಹೇಶ | ಸಿ.ಡಬ್ಲ್ಯೂ - 09 |
| ತಂದೆಯ ಹೆಸರು | ಃ ಅನಂತ ಪೂಜಾರಿ | ಪಿ.ಡಬ್ಲ್ಯೂ - 09 |
| ವಯಸ್ಸು | ಃ 36 ವರ್ಷ | |
| ಉದ್ಯೋಗ | ಃ ಆಟೋ ಚಾಲಕ | |
| ವಾಸಸ್ಥಳ | ಃ ಗಡಿಗೇಶ್ವರ | |

ದಿನಾಂಕಃ **03/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ಆರೋಪಿತರ ಪರಿಚಯ ಇರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 13/08/2025 ರಂದು ರಾತ್ರಿ ವೇಳೆಯಲ್ಲಿ 1 ನೇ ಆರೋಪಿಯು ನನಗೆ ಫೋನ್ ಮಾಡಿ ನಮ್ಮ ಸಂಬಂಧಿಕರಿಗೆ ಹುಷಾರಿಲ್ಲ ಹಣ ಬೇಕು ಎಂದು ಕೇಳಿದ್ದು ನನಗೆ ಸದರಿ ಹಣದ ಅವಶ್ಯಕತೆಗೆ ನಮ್ಮ ಮನೆಯಲ್ಲಿ ಗ್ಯಾಸ್ ಸ್ಟೌವ್, ಚಾರ್ಜರ್ ಬ್ಯಾಟರಿ ಮತ್ತು ಇಸ್ತ್ರಿ ಪೆಟ್ಟಿಗೆಯನ್ನು ತೆಗೆದುಕೊಂಡು ರೂ.600 ಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಹಣವನ್ನು ಒಂದು ವಾರದೊಳಗಾಗಿ ವಾಪಾಸ್ಸು ಕೊಟ್ಟು ವಸ್ತುಗಳನ್ನು ತೆಗೆದುಕೊಂಡು ಹೋಗುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.ದಿಃ 15/08/2025 ರಂದು ರಾತ್ರಿ ವೇಳೆ ತಾವು ಗಡಿಗೇಶ್ವರದಲ್ಲಿದ್ದಾಗ ಚಿಕ್ಕಗ್ರಹಾರದ ವಾಸಿ ಅನಿಲ್ ಕುಮಾರ್ ರವರ ಮನೆಯಲ್ಲಿ ಕಳ್ಳತನ ಆಗಿದ್ದು, ಯಾರೋ ಕಳ್ಳರು ಅನಿಲ್ ಕುಮಾರ್ ರವರ ಮನೆಯ ಬೀಗವನ್ನು ಒಡೆದು ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ನನಗೆ ಮಾರಾಟ ಮಾಡಿದ ಮಹೇಶ ಮತ್ತು ದಿನೇಶ ರವರು ಸಹ ಊರಿನಲ್ಲಿ ಕಾಣುತ್ತಿಲ್ಲ ಅವರು ಮದ್ಯವ್ಯಸನಿಗಳಾಗಿ ಅನಿಲ್ ಕುಮಾರ್ ರವರ ಮನೆಯಲ್ಲಿದ್ದ ವಸ್ತುಗಳನ್ನು ಕಳುವು ಮಾಡಿರುವ ಬಗ್ಗೆ ಜನ

ಮಾತನಾಡುತ್ತಿದ್ದು ಆ ಸಂಬಂದ ಅನಿಲ್ ಕುಮಾರ್ ರವರು ಎನ್ ಆರ್ ಪುರ ಪೊಲೀಸ್ ಠಾಣೆಗೆ ದಿಃ 16/08/2025 ರಂದು ದೂರನ್ನು ನೀಡಿದ್ದು, ದಿಃ 18/08/2025 ರಂದು ಪೊಲೀಸರು ಅನಿಲ್ ಕುಮಾರ್ ರವರ ಮನೆಯಲ್ಲಿ ಕಳ್ಳತನ ಮಾಡಿದ ಆರೋಪಿತರನ್ನು ನಮ್ಮ ಮನೆಯ ಬಳಿ ಬಂದುಅನಿಲ್ ಕುಮಾರ್ ರವರ ಮನೆಯಲ್ಲಿ ಕಳ್ಳತನ ಮಾಡಿದ ವಸ್ತುಗಳನ್ನು ನಿಮಗೆ ಮಾರಾಟ ಮಾಡಿರುವುದಾಗಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದು ಸದರಿ ವಸ್ತುಗಳನ್ನು ಮಹಜರು ಮೂಲಕ ಪಡೆಯಬೇಕಿರುತ್ತದೆ ಎಂದು ನನಗೆ ತಿಳಿಸಿ ವಸ್ತುಗಳನ್ನುಹಾಜರುಪಡಿಸುವಂತೆ ಸೂಳಿಸಿದ ಮೇರೆಗೆ ನಾನು ಗ್ಯಾಸ್ ಸ್ಟೌವ್, ಚಾರ್ಜರ್ ಬ್ಯಾಟರಿ ಹಾಗೂ ಒಂದು ವಿದ್ಯುತ್ ಇಸ್ತ್ರಿ ಪೆಟ್ಟಿಗೆಯನ್ನುಹಾಜರುಪಡಿಸಿದ್ದು ಅವುಗಳನ್ನು ಮಹಜರು ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂಬಂದ ನಾನು ಈಗ ಓದಿ ಹೇಳಿದ ನಿಪಿ 24 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ 24 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲ ಃಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ